# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ , ಮೈಸೂರು

| ಎಸ್. ಸಿ. | 110/2017 |
|---|---|

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಶ್ರೀ ನಂದೀಶ್ | **ಪ್ರಮಾಣ ಮಾಡಿಸಿದ ದಿನಾಂಕ** | |
| **ತಂದೆ ಹೆಸರು** | ಃ | ವೆಂಕಟೇಶ್ | **18.10.2019** | |
| **ವಯಸ್ಸು** | ಃ | 28 **ವರ್ಷ** | | |
| **ವೃತ್ತಿ** | ಃ | ಹೋಟೇಲ್ ವ್ಯಾಪಾರ | **PW:** | 12 |
| **ವಾಸಸ್ಥಳ** | ಃ | **ಕುವೆಂಪು ನಗರ, ಮೈಸೂರು** | **CW:** | 20 |

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

. ನನಗೆ ಈಗ ತೋರಿಸಿದ ದಾಖಲೆಯನ್ನು ನಿ.ಪಿ.64 ಮತ್ತು ನನ್ನ ಸಹಿಯನ್ನು ನಿ.ಪಿ.64(ಎ) ರಂತೆ ಗುರುತಿಸಲಾಯಿತು. ದಿನಾಂಕಃ 25.12.2016 ರಂದು ಬೆಳಗ್ಗೆ 10.00 ರ ವೇಳೆಗೆ ವಿ.ವಿ.ಪುರಂ ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿದ್ದು ಚಾ.ಸಾ. 21 ಅವರು ಠಾಣೆಯಲ್ಲಿ ಹಾಜರಿದ್ದರು. ತನಿಖಾಧಿಕಾರಿ ಪಡುವರಹಳ್ಳಿ ಕೃಷ್ಣ ಅವರ ಕೊಲೆ ಪ್ರಕರಣದ ಮಾಹಿತಿ ನೀಡಿ ಠಾಣೆಯ ಸೆಲ್ ನಲ್ಲಿ ಇದ್ದ 3 ನೇ ಆರೋಪಿಯನ್ನು ತೋರಿಸಿದಾಗ 3 ನೇ ಆರೋಪಿ ತನ್ನ ವಶದಲ್ಲಿದ್ದ ನೋಕಿಯಾ ಕಂಪನಿಯ ಕಪ್ಪು ಬಿಳುಪು ಮೊಬೈಲನ್ನು ಹಾಜರು ಮಾಡಿದ ಮೇರೆಗೆ ತನಿಖಾಧಿಕಾರಿ ಸಿಮ್ಮನ್ನು ನೋಡಿ ಮೊಬೈಲಿಗೆ ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿದ್ದಾರೆ (ಸೀಲು ಮಾಡಿದ ಪ್ಯಾಕೇಟನ್ನು ಈಗ ತೆಗೆಯಲಾಯಿತು ). ಸಾಕ್ಷಿದಾರರಿಗೆ ಮೊಬೈಲನ್ನು ಮತ್ತ ಸಿಮ್ಮನ್ನು ತೋರಿಸಲಾಗಿ ಸಾಕ್ಷಿದಾರರು ಗುರುತಿಸಿದ ಮೇರಗೆ ಮು.ಮಾ.19 ರಂತೆ ಗುರುತಿಸಲಾಯಿತು. ತನಿಖಾಧಿಯವರು ನಿ.ಪಿ.64 ಮಹಜರ ಮೂಲಕ ಮೊಬೈಲ್ ಮತ್ತು ಸಿಮ್ಮನ್ನು ವಶಕ್ಕೆ ಪಡೆದಿದ್ದಾರೆ. ಮಹಜರನ್ನು ಬೆಳಗ್ಗೆ 10.00 ರಿಂದ 11.30 ರ ಅವಧಿಯಲ್ಲಿ ಮಾಡಿದ್ದಾರೆ. ನ್ಯಾಯಾಲಯದಲ್ಲಿ ಹಾಜರಿರುವ 3 ನೇ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು : ಆರೋಪಿ 1 ರಿಂದ 6 ಪರ ಶ್ರೀ ಟಿ.ಪಿ.ಡಿ. ವಕೀಲರಿಂದ:-</u>

2016 ನೇ ಸಾಲಿನಲ್ಲಿ ನಾನು ಪಡುವಾರಹಳ್ಳಿಯಲ್ಲಿ ವಾಸ ಇದ್ದೆ. ಸದರಿ ವೇಳೆ ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ ಬೆಳಗ್ಗೆ 10.30 ರಿಂದ 11.00 ರ ಸಮಯ ಆಗಿತ್ತು. ನಾನು ಹಲವಾರು ಬಾರಿ ಠಾಣೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ನನಗೆ ಠಾಣೆಗೆ ಬರುವಂತೆ ಲಿಖಿತ ನೋಟಿಸ್ಸು ಕೊಟ್ಟಿರಲಿಲ್ಲ. ಮಹಜರ್ ಗೆ ನನ್ನ ಜೊತೆ ಸಹಿ ಮಾಡಿದ ವ್ಯಕ್ತಿಯ ಪರಿಚಯ ಇಲ್ಲ. ನಾನು ಠಾಣೆಗೆ ಹೋದ ನಂತರ ತನಿಖಾಧಿಕಾರಿ ಪ್ರಕರಣದ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿ. ಅಂದು ಠಾಣೆಯಲ್ಲಿ 3 ನೇ ಆರೋಪಿಯ ಜೊತೆ ಬೇರೆ ಆರೋಪಿಗಳು ಇದ್ದ ಬಗ್ಗೆ ಮಾಹಿತಿ ಇಲ್ಲ. ನಾನು ತನಿಖಾಧಿಕಾರಿ ಕೊಠಡಿಗೆ ಹೋದಾಗ ಚಾ.ಸಾ.21 ಶ್ರೀ ಅಜಿತ್ ಇದ್ದರು. ನಾನು ಠಾಣೆಗೆ ಹೋದಾಗ ಮು.ಮಾ.19 ತನಿಖಾಧಿಕಾರಿ ವಶದಲ್ಲಿ ಇತ್ತು ಎಂದರೆ ಸರಿಯಲ್ಲ. 3 ನೇ ಆರೋಪಿಯು ಮೊಬೈಲನ್ನು ಹಾಜರು ಮಾಡಿದ ನಂತರ ಸದರಿ ಮೊಬೈಲು ಕೆಲಸ ಮಾಡುತ್ತಿದ್ದ ಬಗ್ಗೆ ಅಥವಾ ಚಾರ್ಜ ಇದ್ದ ಬಗ್ಗೆ ನಾನು ನೋಡಿಲ್ಲ.

ತನಿಖಾಧಿಕಾರಿಯು ಮೊಬೈಲ್ ನಲ್ಲಿ ಇದ್ದ ವಾಯಿಸ್ ಮೆಸೇಜನ್ನು ನನ್ನ ಸಮಕ್ಷಮ ತೆಗೆದು ನೋಡಿಲ್ಲ. ಮೊಬೈಲ್ ನಲ್ಲಿ ಐಡಿಯಾ ಕಂಪನಿಯ ಸಿಮ್ ಇತ್ತು. ತನಿಖಾಧಿಕಾರಿ 3 ನೇ ಆರೋಪಿಯ ಬಳಿ ಮೊಬೈಲ್ ಬಗ್ಗೆ ವಿಚಾರ ಮಾಡಿದ್ದಾರೆ. ಮೊಬೈಲ್ ಮತ್ತು ಸಿಮ್ಮನ್ನು ಒಟ್ಟಿಗೆ ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿದ್ದರು. 3 ನೇ ಆರೋಪಿಯಿಂದ ಮೊಬೈಲ್ ಮತ್ತು ಸಿಮ್ಮನ್ನು ವಶಕ್ಕೆ ಪಡೆದ ಬಗ್ಗೆ 3 ನೇ ಆರೋಪಿಗೆ ಲಿಖಿತ ಹಿಂಬರಹ ಮತ್ತು ಸ್ವೀಕೃತಿ ಕೊಟ್ಟ ಬಗ್ಗೆ ನೆನಪಿಲ್ಲಾ. ನನ್ನ ಸಮಕ್ಷಮ 3 ನೇಯ ಆರೋಪಿಯ ಅಂಗಶೋಧನೆ ಮಾಡಿಲ್ಲ. ನಿ.ಪಿ.64 ರ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಿನಾಂಕ: 25.12.2016 ರ ಮೊದಲು ನಾನು 3 ನೇ ಆರೋಪಿಯನ್ನು ನೋಡಿಲ್ಲ. ಮೊಬೈಲ್ ನಿಂದ ಸಿಮ್ಮನ್ನು ಪೊಲೀಸ್ ಸಿಬ್ಬಂದಿ ತೆಗೆದಿದ್ದಾರೆ. ಪೊಲೀಸ್ ಸಿಬ್ಬಂದಿಯ ಹೆಸರು ಗೊತ್ತಿಲ್ಲ.

<u>ಪಾಟೀ ಸವಾಲು : ಆರೋಪಿ 7 ಪರ ಶ್ರೀ ಜೆ.ವಿ.ಆರ್, ವಕೀಲರಿಂದ:-</u>

.ಪಾಟೀ ಸವಾಲು ಇಲ್ಲ.

<u>ಪಾಟೀ ಸವಾಲು ಃ ಆರೋಪಿ 8, 10, 11 ಮತ್ತು 12 ರ ಪರ ಶ್ರೀ ಜಿ.ಎಂ.ಎನ್. ವಕೀಲರಿಂದಃ-</u>

.ಪಾಟೀ ಸವಾಲು ಇಲ್ಲ.

<u>ಪಾಟೀ ಸವಾಲು ಃ ಆರೋಪಿ 9 ಪರ ಶ್ರೀ ಯು.ಎಸ್. ವಕೀಲರಿಂದಃ-</u>

.ಪಾಟೀ ಸವಾಲು ಇಲ್ಲ.

**<u>ಮರುವಿಚಾರಣೆ - ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ.,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**